ಫೈನ್ಯಾನ್ಸ್‌ಷಿಯಲ್ ಇಲಾಖೆ.

ಇನ್ಸ್ಟ್ರಕ್ಷನ್ಸ್.

ತಾರೀಖು 17ನೆ ನವಂಬರ್ 1909.

ನಂ. ಫೈ. 2433—ಜ. ಫೈ. 207-09-1, 1907ನೆ ಇಸವಿ ಮೇ 6ನೆ ಮುಕ್ರುಮಿನ ಫೈ. 8334-72ನೆ ನಂಬರ್ ಹುಕ್ಕುಂ ಮೇರಿಗೆ.

(1) ಸಂಬಳ ಮತ್ತು ಅಲೋಯರ್ಸ್ ಯಾನೆ ವೇತನಗಳು, ಪರ್ಷ್ ಮತ್ತು ಗ್ರಾಟ್ಯೂಟಿ ಸಹಾ.

(2) ಅಂದಾಜಾಗಳು.

(3) ಲೆಕ್ಕಗಳನ್ನು ಬಾಬುವಾರು ವಿಂಗಡಿಸುವುದು.

(4) ಲೆಕ್ಕಗಳು.

(5) ಆಡಿಟ್ ಮತ್ತು ಬಾಬು ಹೊರಳಿ ಮಾಡುವುದು.

(6) ಫೈನ್ಯಾನ್ಷಿಯಲ್ ನಿಬಂಧನೆಗಳ ಅರ್ಥವಿವರಣೆ ಮತ್ತು ಅವುಗಳ ಅನ್ವಯ.

(7) ಜವಾಬ್ದಾರಿನ ಹಣದ ವಿಷಯ.

(8) ಸಾಲಗಳು ಮತ್ತು ಸರ್ಕಾರಿ ಹಣವನ್ನು ಇನ್‌ವೆಸ್ಟ್ ಮಾಡುವದು ಯಾನೆ ಉಪಯೋಗಿಸುವುದು.

(9) ವ್ಯಾಪಾರಸಂಬಂಧ ಮತ್ತು ಫೈನ್ಯಾನ್ಷಿಯಲ್ ಸಂಬಂಧ ಏರ್ಪಾಡುಗಳ ಆದಾಯ ಖರ್ಚು ಬಾಬನ್ನು ಪರ್ಯಾಲೋಚಿಸುವುದು.

ಈ ಬಾಬುಗಳಿಗೆ ಸಂಬಂಧಪಟ್ಟ ಕಾಗದ ಪತ್ರಗಳನ್ನು ಸರ್ಕಾರದ ಫೈನ್ಯಾನ್ಷಿಯಲ್ ಸೆಕ್ರಿಟೆರಿಯವರ ವಿಳಾಸಕ್ಕೆ ಬರೆದು ರವಾನಿಸಬೇಕೆಂದು ಹುಕ್ಕುಂ ಸಾದರಾಗಿರುತ್ತದೆ. ಆದರೂ ಈಚಿಗೆ ಕೆಲವು ಸಂದರ್ಭಗಳಲ್ಲಿ ಈ ವಿಷಯಗಳಿಗೆ ಸಂಬಂಧಪಟ್ಟ ಕಾಗದಪತ್ರಗಳನ್ನು ಸರ್ಕಾರದ ಇತರ ಸೆಕ್ರಿಟೆರಿಗಳ ವಿಳಾಸಕ್ಕೆ ಬರದು ಕಳುಹಿಸುತ್ತಾ ಇದ್ದಾರೆ. ಈರೀತಿ ಕಾಗದಪತ್ರಗಳನ್ನು ತಪ್ಪು ವಿಳಾಸಕ್ಕೆ ರವಾನಿಸುತ್ತಿರೋಣದರಿಂದ ಸರ್ಕಾರೀ ಕೆಲಸಗಳು ಸಲೀಸು ನಡೆಯದೆ ಸಾವಕಾಶಕ್ಕೂ, ಅನಾನುಕೂಲಕ್ಕೂ ಆಸ್ಪದವಾಗುತ್ತಿದೆ. ಆದುದರಿಂದ ಇಲಾಖೆಗಳ ಮೊಖ್ತೇಸರರು, ಡಿಪ್ಯುಟಿ ಕಮಿಷನರುಗಳು ಮತ್ತು ಇತರರು ಮೇಲ್ಕಂಡ ಸರ್ಕಾರಿ ಹುಕ್ಕುಂಮಿನ 3ನೆ ಪ್ಯಾರಾದಲ್ಲಿ ನಮೂದಾಗುವ ತಿಳುವಳಿಕೆಗಳಿಗೆ ಗಮನಕೊಡಬೇಕು; ಮತ್ತು ಐಯಿಂದ ಸರ್ಕಾರಕ್ಕೆ ಕಳುಹಿಸಿಕೊಡತಕ್ಕ ಕಾಗದಪತ್ರಗಳ ವಿಷಯಗಳಲ್ಲಿ ಈ ತಿಳುವಳಿಕೆಗಳನ್ನು ಖಂಡಿತವಾಗಿ ಜಾರಿಯಲ್ಲಿ ತರಲು ತರದೂದು ನಡೆಸಬೇಕೆಂದು ಕೋರಿ ಇದೆ.

ಹುಕುಂ ಬವೋಜೇಬ್,
ಜೆ. ಎಸ್. ಚಕ್ರವರ್ತಿ,
ಫೈನ್ಯಾನ್ಷಿಯಲ್ ಸೆಕ್ರಿಟೆರಿ.